
# ಕುವೆಂಪು ಚಿತ್ರಿಸಿದ ಅಪೂರ್ವ ಪಾತ್ರ ಕಾನೂರಿನ ಸುಬ್ಬಮ್ಮ ಹೆಗ್ಗಡಿತಿ



ಗಂಡನ ಕಿಸೆಯಿಂದ ಎತ್ತಿ ಹೊರಗೆ ದಾಟಿಸುವಷ್ಟು ಚಾಲಾಕಿತನದಲ್ಲಿ. ಸುಬ್ಬಮ್ಮನ ಪ್ರತಿ ಕೆಲಸದಲ್ಲಿಯೂ ಕಾಣುವ ಒರಟುತನವನ್ನು ಕುವೆಂಪು ಇಂಚಿಂಚೂ ವರ್ಣಿಸುತ್ತಾರೆ. ಸುಬ್ಬಮ್ಮ ಕೊನೆಗಾದರೂ ಒಳ್ಳೆಯವಳಾಗಿ ಬಾಳುವಳೇ? ಕಥೆಯ ಕೊನೆಗೆ ಹಾಗಾಗಬೇಕಲ್ಲವೇ? ಆದರೇಕೊ ಸುಬ್ಬಮ್ಮ ಹೆಗ್ಗಡಿತಿ ದುರಂತವನ್ನೇ ಕಂಡು ಬಿಡುತ್ತಾಳೆ. ಅವಳ ಜೀವನಕ್ಕೊಂದು ಅರ್ಥವೇ ಇಲ್ಲದಂತೆ ಮುಗಿತಾಯ ಬಂದುಬಿಡುತ್ತದೆ. ಇದೇಕೆ?

ಹೆಣ್ಣಿನ ಹೆಣ್ತನವನ್ನು ಹಲವು ಬಗೆಯ ಆವರಣಗಳು ಸುತ್ತುವರೆದಿವೆ. ಕುಟುಂಬ, ಮನೆ, ಪಾತಿವ್ರತ್ಯ ಎಲ್ಲವೂ ಆಕೆಯನ್ನು ನಿಯಂತ್ರಿಸುವುದಕ್ಕೆ ಇರುವ ಅಧಿಕಾರ ಸಂಗತಿಗಳಾಗಿವೆ. ಈ ಅಧಿಕಾರಗಳನ್ನು ಬಹಿರಂಗವಾಗಿ ಹೆಣ್ಣಿನ ಮೇಲೆ ಚಲಾಯಿಸಲು ಇರುವ ಜಾಗವೆಂದರೆ ಮನೆ. ಅದರಲ್ಲಿ ಹೆಂಗಸು ತನ್ನ ಅಸ್ತಿತ್ವವನ್ನೇನಾದರೂ ಉಳಿಸಿಕೊಳ್ಳುವ ಜಾಗವೆಂದರೆ,